


## ಮ್ಯಾನುಯಲ್ ಸ್ಕ್ಯಾವೆಂಜಿಂಗ್
# ಎಂದರೇನು?

ಮಾನ್ಯುಯಲ್ ಸ್ಕ್ಯಾವೆಂಜಿಂಗ್ ಅಥವಾ ಮಲ ಹೊರುವ ಪದ್ಧತಿ ಅಥವಾ ಮಲ ಬಾಚುವ ಪದ್ಧತಿ ಎಂದರೆ ಬರಿಗೈಯಿಂದ ಮಾನವ ಮಲವಿಸರ್ಜನೆಯ ಶುಚಿಗೊಳಿಸುವಿಕೆ, ಒಯ್ಯುವುದು, ವಿಲೇವಾರಿ ಮಾಡುವುದು ಅಥವಾ ಯಾವುದೇ ರೀತಿಯ ನಿರ್ವಹಣೆ.

Alternative Law Forum
*lawyering for change*

## ಮ್ಯಾನುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯಿದೆ 2013

ಕರ್ನಾಟಕದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಅನ್ನು 1976ರಲ್ಲಿ ನಿಷೇಧಿಸಲಾಯಿತು. 1993ರಲ್ಲಿ ಸಂಸತ್ತು ದೇಶಾದ್ಯಂತ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಅನ್ನು ನಿಷೇಧಿಸುವ ಕಾಯಿದೆಯನ್ನು ಅಂಗೀಕರಿಸಿತು. 2013ರಲ್ಲಿ, ಮ್ಯಾನುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯಿದೆ ಎಂಬ ಸಮಗ್ರ ಕಾಯ್ದೆಯನ್ನು ಜಾರಿಗೊಳಿಸಲಾಯಿತು.

**2013ರ ಕಾಯಿದೆಯ ಅಡಿಯಲ್ಲಿ, ಈ ಕೆಳಗಿನ ಕಾರ್ಯಗಳಿಗಾಗಿ ಯಾರನ್ನಾದರೂ ತೊಡಗಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ ಮತ್ತು ಶಿಕ್ಷಾರ್ಹ ಅಪರಾಧವಾಗಿದೆ:-**



ಮಾನವ ಮಲವಿಸರ್ಜನೆಯನ್ನು ಕೈಯಿಂದ ಸ್ವಚ್ಛಗೊಳಿಸುವುದು



ಫ್ಲಶ್ ಇಲ್ಲದ ಶೌಚಾಲಯಗಳನ್ನು ಕೈಯಿಂದ ಸ್ವಚ್ಛಗೊಳಿಸುವುದು



ಮ್ಯಾನ್‌ಹೋಲ್/ಒಳಚರಂಡಿಗಳನ್ನು ಕೈಗಳಿಂದ ಸ್ವಚ್ಛಗೊಳಿಸುವುದು



ಶೌಚದ ಗುಂಡಿಗಳನ್ನು ಕೈಗಳಿಂದ ಸ್ವಚ್ಛಗೊಳಿಸುವುದು

ಅಂತಹ ಶುಚಿಗೊಳಿಸುವ ಕೆಲಸವು ಅಗತ್ಯವಿದ್ದಾಗ, ಸ್ವಚ್ಛಗೊಳಿಸುವ ಯಂತ್ರಗಳಿಗೆ ಕರೆ ಮಾಡಲು ನಿಮ್ಮ ಪುರಸಭೆ ಅಥವಾ ಗ್ರಾಮ ಪಂಚಾಯತ್ ಅನ್ನು ಸಂಪರ್ಕಿಸಿ:-



ಯಂತ್ರಗಳನ್ನು ಬಳಸಿಕೊಂಡು ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು

## ಯಾರಾದರೂ ಯಾವುದೇ ರೀತಿಯ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಮಾಡುವುದನ್ನು ನೋಡಿದಾಗ ನೀವು ಏನು ಮಾಡಬಹುದು?

- 100ಗೆ ಕರೆ ಮಾಡುವ ಮೂಲಕ ಪೊಲೀಸರಿಗೆ ಮಾಹಿತಿ ನೀಡಿ ಅಥವಾ ಘಟನೆಯ ಚಿತ್ರವನ್ನು ತೆಗೆದುಕೊಂಡು ಕರ್ನಾಟಕ ಪೊಲೀಸ್ ಆಪ್‌ನಲ್ಲಿ ಅಪ್‌ಲೋಡ್ ಮಾಡಿ
- ಸ್ಥಳೀಯ ಪುರಸಭೆ ಅಥವಾ ಗ್ರಾಮ ಪಂಚಾಯಿತಿಗೆ ಮಾಹಿತಿ ನೀಡಿ
- ಕರ್ನಾಟಕ ರಾಜ್ಯ ಸಫಾಯಿಕರ್ಮಚಾರಿಗಳ ಆಯೋಗಕ್ಕೆ ದೂರು ಸಲ್ಲಿಸಬಹುದು - ವೆಬ್‌ಸೈಟ್: https://skc.karnataka.gov.in; ಇಮೇಲ್: ksskcb@gmail.com; ದೂರವಾಣಿ - 080-22240445/6